(೧೭) ಪುತ್ತೂರಿನ ಬಸ್ ನಿಲ್ದಾಣಕ್ಕೆ ಡಾಂಬರು/ಕಾಂಕ್ರೀಟ್ ಹಾಕುವ ಬಗ್ಗೆ

ಶ್ರೀ ವಿನಯಕುಮಾರ ಸೊರಕೆ(ಪುತ್ತೂರು).—ಮಾನ್ಯ ಅಧ್ಯಕ್ಷರೇ, ಪುತ್ತೂರು ಸರಕಾರಿ ಬಸ್ಸು ನಿಲ್ದಾಣದ ಕೆಲಸ ಕಾರ್ಯವು ಕಳೆದ ೧೫ ವರ್ಷದ ಹಿಂದೆ ಪೂರ್ತಿಯಾಗಿದ್ದು, ಇದರ ಉದ್ಘಾಟನೆ ಮಾನ್ಯ ಮಂತ್ರಿಗಳ ಮುಖಾಂತರ ನಡೆದಿರುತ್ತದೆ. ಅನಂತರ ಈ ಸ್ಥಳದಲ್ಲಿ ಬಸ್ಸು ನಿಲ್ದಾಣ ವ್ಯವಸ್ಥೆಯಾಗಿದ್ದು, ಆ ಸಂದರ್ಭದಲ್ಲಿ ಬಸ್ ನಿಲ್ದಾಣದ ಆವರಣಕ್ಕೆ ಡಾಂಬರು ಅಥವಾ ಕಾಂಕ್ರೀಟ್ ಹಾಕುವುದು, ಶೌಚಗೃಹ ನಿರ್ಮಾಣ ಮಾಡಿಲ್ಲಿದಿತ್ತು. ಈ ಬಸ್‌ನಿಲ್ದಾಣಕ್ಕೆ ಧರ್ಮಸ್ಥಳ, ಸುಬ್ರಮಣ್ಯ, ಉಡುಪಿ ಮುಂತಾದ ಸ್ಥಳಗಳಿಗೆ ಹೋಗುವ ಅಸಂಖ್ಯಾತ ಪ್ರಯಾಣಿಕರು ಪ್ರತಿದಿನ ಬರುತ್ತಾರೆ ಶೌಚಗೃಹವಿಲ್ಲದೆ ಅವರಿಗೆಲ್ಲ ಬಹಳ ತೊಂದರೆಯಾಗಿದೆ. ಬಸ್ ನಿಲ್ದಾಣಕ್ಕೆ ಡಾಂಬರು ಅಥವಾ ಕಾಂಕ್ರೀಟ್ ಹಾಕದೆಧೂಳು ಎದ್ದು ಬಸ್ ನಿಲ್ದಾಣದ ಕ್ಯಾಂಟೀನ್ ಒಳಗೆ ಹಾಗೂ ಪ್ರಯಾಣಿಕರ ಮೇಲೆ ಧೂಳು ತುಂಬುವುದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟಂತಹ ಅಧಿಕಾರಿಗಳಿಗೆ ಒತ್ತಾಯಿಸಿ ತಂದರೂ ಯಾವುದೇ ಕ್ರಮವನ್ನೂ ಕೈಗೊಳ್ಳದಿರುವುದು ತೀರಾ ವಿಷಾದನೀಯ. ಆದುದರಿಂದ ಮಳೆಗಾಲ ಪ್ರಾರಂಭ ಆಗುವುದಕ್ಕಿಂತ ಮೊದಲು ಈ ಕೆಲಸಗಳನ್ನು ಪೂರ್ತಿಗೊಳಿಸುವ ರೀತಿಯಲ್ಲಿ ಕೆಲಸವನ್ನು ಕೈಗೊಳ್ಳುವಂತೆ ಸರಕಾರ ತೀವ್ರ ಕ್ರಮ ಕೈಗೊಳ್ಳಬೇಕಾಗಿ ಸರಕಾರವನ್ನು ತಮ್ಮ ಮುಖಾಂತರ ಒತ್ತಾಯಿಸುತ್ತೇನೆ.

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಾಣಿಜ್ಯಾನೆಗಳ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ನಿಯಮ ೩೩೪ ರ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ನೀಡಲು ಇಚ್ಛಿಸುತ್ತೇನೆ.

ಪುತ್ತೂರಿನಲ್ಲಿ ಬಸ್‌ನಿಲ್ದಾಣ ನಿರ್ಮಾಣಕ್ಕಾಗಿ ೭.೫೦ ಲಕ್ಷ ರೂಗಳಿಗೆ ೮೧-೮೨ ರ ಸಾಲಿನಲ್ಲಿ ಮಂಜೂರಾತಿ ನೀಡಲಾಗಿತ್ತು. ಈ ಕಾರ್ಯವನ್ನು ಟೆಂಡರ್ ಮೂಲಕ ಗುತ್ತಿಗೆದಾರರನ್ನು ನೇಮಿಸಿ ೧೯೮೩ನೇ ಸಾಲಿನಲ್ಲಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಯಿತು. ಈ ಕಾರ್ಯವನ್ನು ೮೫-೮೬ನೇ ಸಾಲಿನಲ್ಲಿ ಪೂರ್ಣಗೊಳಿಸಿ ದಿನಾಂಕ ೧೮-೧೨-೮೫ ರಂದು ಮಾನ್ಯ ಸಾರಿಗೆ ಸಚಿವರಿಂದ ಉದ್ಘಾಟಿಸಲ್ಪಟ್ಟಿತು. ಪುತ್ತೂರಿನಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲವಾದುದರಿಂದ ಕೇವಲ ಮೂತ್ರಿಗಳನ್ನು ಮಾತ್ರ ಬಸ್‌ನಿಲ್ದಾಣದಲ್ಲಿ ನಿರ್ಮಿಸಲಾಗಿದೆ. ಬಸ್‌ನಿಲ್ದಾಣವು ನಗರದ ಕೇಂದ್ರ ಸ್ಥಳದಲ್ಲಿರುವುದರಿಂದಹಾಗೂ ಭೂಮಿಯನ್ನು ಲ್ಯಾಟರೇಟ್‌ನಿಂದ ಕೂಡಿರುವುದರಿಂದ ಸೆಪ್ಟಿಕ್ ಟ್ಯಾಂಕ್ ಮಾಡಿದರೆ ಫಲಕಾರಿಯಾಗುವುದಿಲ್ಲ. ಸ್ಥಳೀಯ ಪುರಸಭಾ ಅಧಿಕಾರಿಗಳನ್ನು ಸಂಪರ್ಕಿಸಿದರೂ, ಬಸ್‌ನಿಲ್ದಾಣದ ಕೊಳಚೆ ನೀರನ್ನು ಹೊರ ಹಾಕಲು ಪೋರಿ ವ್ಯವಸ್ಥೆಯನ್ನು ಮಾಡಿರುವುದಿಲ್ಲ.

ಬಸ್‌ನಿಲ್ದಾಣದ ಆವರಣಕ್ಕೆ ಡಾಂಬರು ಇಲ್ಲವೆ ಕಾಂಕ್ರೀಟ್ ಹಾಕಲು ಒಂದೆರಡು ಮಳೆಗಾಲ ಕನಿಷ್ಟ ಬೇಕಾಗುತ್ತದೆ. ಇದು ಸಾಮಾನ್ಯವಾಗಿ ಅನುಸರಿಸುವ ಪದ್ಧತಿ. ಆದ್ದರಿಂದ ಈಗ ಎರಡು ಋತುಗಳು ಕಳೆದಿರುವುದರಿಂದ, ಮಳೆಗಾಲ ಪ್ರಾರಂಭವಾಗುವುದರೊಳಗೆ ಈ ಕಾರ್ಯವನ್ನು ಕೈಗೊಂಡು ಪೂರ್ಣಗೊಳಿಸಲಾಗುವುದು.

ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಎಲ್ಲಾ ಬಸ್‌ನಿಲ್ದಾಣಗಳ ಆವರಣಗಳಿಗೆ ಡಾಂಬರು ಕಾಂಕ್ರೀಟ್ ಹಾಕಲು ೮೫-೮೬ನೇ ಸಾಲಿನ ಆಯವ್ಯಯದಲ್ಲಿ ಯೋಚಿಸಲಾಗಿದೆ.

(೧೮) ಸಾಗರದಲ್ಲಿ ಹಾಲು ಶೇಖರಿಸಲು ಮತ್ತು ಮಾರಾಟ ಮಾಡಲು ವ್ಯವಸ್ಥೆ ಮಾಡುವ ಬಗ್ಗೆ

ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ "ಐ.ಆರ್.ಡಿ.ಪಿ. ಯಿಂದ ಎಮ್ಮೆಗಳನ್ನು ಸಾಲದ ಮೇಲೆ ಹಳ್ಳಿಹಳ್ಳಿಗೂ ಒದಗಿಸಿದ್ದು ಕಡುಬಡವರು ಈಗ ಹಾಲನ್ನು ಹಳ್ಳಿಹಳ್ಳಿಗಳಲ್ಲಿ ಯಥೇಚ್ಛವಾಗಿ ಉತ್ಪಾದಿಸುತ್ತಿದ್ದಾರೆ. ಆದರೆ ಹಳ್ಳಿಗಳಲ್ಲಿ ಉತ್ಪಾದಿಸಲ್ಪಟ್ಟ ಬೇಡಿಕೆ ಇಲ್ಲದೇ ಸಾಲ ಪಡೆದ ಫಲಾನುಭವಿಗಳು ವಿಪರೀತ ಕಷ್ಟಕ್ಕೊಳಗಾಗಿದ್ದಾರೆ. ಹಳ್ಳಿಗಳಲ್ಲಿ ಉತ್ಪಾದಿಸಲ್ಪಟ್ಟ ಹಾಲನ್ನು ತೀವ್ರ ಬೇಡಿಕೆ ಇರುವ ಸ್ಥಳಗಳಿಗೆ ಕಳುಹಿಸುವ ವಿಷಯದಲ್ಲಿ ಮಾದೇ ಹೋದಲ್ಲಿ ಎಮ್ಮೆ ಸಾಲ ಪಡೆದವರು ಸಾಲ ತೀರಿಸಲು ಸಾಧ್ಯವಾಗದೇ ಹೋಗಲಿದ್ದು ಆಮೇಲ್ಲಿಂದ ತೀರಾ ದುರವಸ್ಥೆಗೆ ತಲ್ಲಣಲ್ಲಿದುಹೋಗುವ ಸಂಭವವಿರುವುದರಿಂದ ಮಾನ್ಯ ಸಾರಿಗೆ ಸಚಿವರು ಈ ಬಗ್ಗೆ ಹಾಲನ್ನು ಶೇಖರಿಸಲು ಹಾಗೂ ಬೇಡಿಕೆ ಇರುವ ಸ್ಥಳಗಳಿಗೆ ಬಸ್ಸುಗಳಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ."